**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 8/2025** **ಪಿಡಬ್ಲ್ಯುಃ 10**
**ಸಿ.ಡಬ್ಲ್ಯುಃ18**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುಧೀರ್ ಕುಮಾರ್ ಕೆ. |
| ತಂದೆಯ ಹೆಸರು | - | ಲೇಟ್ ಕರಿಯ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ತಾಂತ್ರಿಕ ಸಹಾಯಕರು, ಯೋಜನಾ ವಿಭಾಗ, ಪಂಚಾಯತ್ ರಾಜ್ ಇಲಾಖೆ, ಉಡುಪಿ |
| ವಿಳಾಸ | - | ಉಡುಪಿ |

ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2023 ರಿಂದ ಜೂನ್ 2025 ರವರೆಗೆ ಸಹಾಯಕ ಅಭಿಯಂತರರಾಗಿ ಲೋಕೋಪಯೋಗಿ ಇಲಾಖೆ, ಉಡುಪಿ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 23-10-2024 ರಂದು ಪ್ರಕರಣದ ತನಿಖಾಧಿಕಾರಿಯವರು ಈ ಪ್ರಕರಣದ ತಕ್ಷೀರು ಸ್ಥಳವನ್ನು ಪರಿಶೀಲಿಸಿ ನಕ್ಷೆ ತಯಾರಿಸಿ ಕೊಡುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಕೋರಿಕೊಂಡಿರುತ್ತಾರೆ. ನಂತರ ತಕ್ಷೀರು ಸ್ಥಳದ ನಕ್ಷೆ ತಯಾರಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ನನಗೆ ಸೂಚಿಸಿರುತ್ತಾರೆ. ಅದರಂತೆ ದಿನಾಂಕ 18-12-2024 ರಂದು ನಾನು ಎಚ್.ಸಿ. 55 ಇವರ ಜೊತೆ ಘಟನಾ ಸ್ಥಳಕ್ಕೆ ಹೋಗಿದ್ದು, ಸ್ಥಳದಲ್ಲಿದ್ದ ಎಚ್.ಸಿ-55 ಇವರು ಸ್ಥಳ ತೋರಿಸಿಕೊಟ್ಟಿದ್ದು, ಸ್ಥಳ ಪಂಚನಾಮೆಯನ್ನು ಆಧಾರಿಸಿ ತಕ್ಷೀರು ಸ್ಥಳವನ್ನು ಪರಿಶೀಲಿಸಿ ನಕ್ಷೆ ತಯಾರಿಸಿರುತ್ತೇನೆ. ಸದ್ರಿ ನಕ್ಷೆಯನ್ನು ನಾನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಒಪ್ಪಿಸಿರುತ್ತೇನೆ. ಅವರು ಒಂದು ಕವಚ ಪತ್ರದೊದಿಗೆ ನಕ್ಷೆಯನ್ನು ತನಿಖಾಧಿಕಾರಿಯವರಿಗೆ

ಒಪ್ಪಿಸಿರುತ್ತಾರೆ. ನಕ್ಷೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಕವಚ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ. ವಕೀಲರಿಂದಃ**

ಘಟನಾ ಸ್ಥಳದ ಬಗ್ಗೆ ಪೋಲಿಸರಿಂದ ಹೊರತುಪಡಿಸಿ ಬೇರೆಯವರಿಂದ ಮಾಹಿತಿ ಪಡೆದಿಲ್ಲ. ನಕ್ಷೆ ತಯಾರಿಸುವ ಪೂರ್ವದಲ್ಲಿ ಸದ್ರಿ ಕಟ್ಟಡದ ಪೂರ್ವ ನಕ್ಷೆಯನ್ನು ಪರಿಶೀಲನೆ ಮಾಡಿಲ್ಲ. ನನ್ನ ಮೇಲಾಧಿಕಾರಿಗಳು ನಕ್ಷೆ ತಯಾರಿಸುವ ಬಗ್ಗೆ ಲಿಖಿತವಾಗಿ ನಿರ್ದೇಶಿಸಿದ್ದಾರೆ, ಸದ್ರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸ್ಥಳವನ್ನು ಎಚ್.ಸಿ. ಸಂತೋಷ್ ಶೆಟ್ಟಿ ರವರು ತೋರಿಸಿದ್ದಾರೆ. ನಿಪಿ-15 ಕ್ಕೆ ಎಚ್.ಸಿ. ರವರ ಸಹಿ ಪಡೆದಿಲ್ಲ. ನಕ್ಷೆಯಲ್ಲಿ ತೋರಿಸಿರುವ ಅಂಗಡಿಗಳ ಅಳತೆ ತೋರಿಸಿಲ್ಲ. ನಿಪಿ-15 ನ್ನು ಪೋಲಿಸರ ಕೋರಿಕೆ ಪ್ರಕಾರ ಕಚೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-15 ನ್ನು ಎಷ್ಟು ಸಮಯದವರೆಗೆ ತಯಾರು ಮಾಡಿದ್ದೇನೆ ಎಂದು ನಮೂದು ಮಾಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ನಿಪಿ-15 ಮತ್ತು 16 ನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ